**IN THE COURT OF PRL. DISTRICT AND SESSIONS JUDGE, AT : GADAG**

**SC No. 04/2021**

**CW - 25 / PW – 17**

**Duly sworn on: 29.10.2024**

**Witness Name : Dr. Gavisiddappa Palled**

**Father's Name : Shantappa**

**Age : 48 years**

**Occupation : Senior Medical Officer, GIMS, Gadag.**

**Residence : Gadag.**

## Chief Examination by Public Prosecutor:

1. Since from 14 years, I have been working as Senior Medical Officer in GIMS, Gadag.

2. With respect to this case, on 06.03.2020 at about 03.30 p.m. PW-2 came to our Hospital with the history of assault.

3. On examination I found the following injuries:

1) Cut lacerated wound measuring 5X1 cm on scalp in the parital region.

4. CT scan report shows normal.

5. I am of the opinion that, the injury is simple in nature. The age of wound is less than 6 hours.

6. In this regard, I have issued wound certificate. Now I see the same, which is already marked as Ex.P-25 and **the signature of the witness is marked as Ex.P-25(b)**.

7. The injury mentioned in Ex.P-25 may be caused if assaulted with MO-4 machet.

8. With respect to this case, on 06.03.2020 at about 03.30 p.m.

PW-6 came to our Hospital with the history of assault.

9. On examination, I found the following injuries:

1) Cut wound over the parital region of head measuring 6X1 cm. Red in color.

2) Tenderness present over the left side of the chest.

10. X-ray report shows no fracture.

11. I am of the opinion that, the injury No.1 and 2 are simple in nature. The age of wound is less than 6 hours.

12. In this regard, I have issued wound certificate. Now I see the same, which is already marked as Ex.P-26 and **the signature of the witness is marked as Ex.P-26(b)**.

13. The injury No.1 mentioned in Ex.P-26 may be caused if assaulted with MO-3- broken soda bottle. The injury No.2 mentioned in Ex.P-26 may be caused if assaulted with MO-1- stone and MO-5 – stick.

14. With respect to this case, on 06.03.2020 at about 03.30 p.m. PW-4 came to our Hospital with the history of assault.

15. On examination, I found the following injuries:

1) 4 X 2 cm Red colored abrasion over the right temporal region of the head.

2) Pain in the lumber area of abdomen.

16. CT Scan report shows no fracture and no injury to any internal organs.

17. I am of the opinion that, the injury No.1 and 2 are simple in nature. The age of wound is less than 6 hours.

18. In this regard, I have issued wound certificate. Now I see the same, which is already marked as Ex.P-22 and **the signature of the witness is marked as Ex.P-22(b)**.

19. The injury No.1 mentioned in Ex.P-22 may be caused if assaulted with MO-5- stick. The injury No.2 mentioned in Ex.P-22 may be caused if the motor bike seen in Ex.P-4 and 5 run over on the abdomen of a person.

## Cross – examination by Shri. M.P. Koliwad, Adv. for Accused :

20. On that day, all the three persons came to our Hospital at 03.30 p.m. I examined PW-2 from 03.30 p.m. to 03.36 p.m. I examined PW-6 from 03.36 p.m. to 03.38 p.m. and I examined PW-4 from 03.38 p.m. to 03.45 p.m. PW-2, 4 and 6 were accompanied by CW-12.

21. I did not examine PWs - 2, 4 and 6 on 05.03.2020.

**Que**: Whether the injuries caused to PW-2 could be caused if a person fallen on the road while going on the motor bike?

**Ans**: The injuries caused to PW-2 could be caused if a person fallen on the road where there is sharp object.

22. The injuries caused to PW-4 could be caused if a person who is cultivating the land and fell down on the ground.

**Que**: Whether the injuries caused to PW-6 could be caused if a person fallen on the road?

**Ans**: The injuries caused to PW-6 could be caused if a person fallen on the road where there is sharp object.

23. It is not true to suggest that, I am not examined PWs-2, 4 and 6 and issued the wound certificates at the instance of the police.

With the permission of the Court, further chief Examination by PP:

24. The police have given requisition along with the stone, soda bottle, machet and stick and sought opinion whether the injuries caused to the PWs-2, 4 and 6 could be caused if assaulted with stone, soda bottle, machet and stick. Now, I see the requisition given by the Police, the same is already marked as Ex.P-23.

25. After examining the stone, soda bottle, machet and stick and the Ex.P-22, 25 and 26, I have given my opinion endorsing on the back side of the Ex.P-23 stating that, the injuries mentioned in Ex.P-22, 25 and 26 could be caused if assaulted with stone, soda bottle, machet and stick sent to me. Now, I see my endorsement and the same already marked as Ex.P-24 and **the signature of the witness is now marked as Ex.P-24(b)**.

26. I can identify the stone, soda bottle, machet and stick examined by me. Now, I see the same which are already marked as MOs- 1, 2, 4 and 5 respectively.

**Further cross - examination by Shri. G.P. Koliwad, Adv. for Accused :**

27. It is not true to suggest that, the injuries mentioned in Ex.P-22, 25 and 26 could not be caused if assaulted with MOs- 1, 2, 4 and 5.

**Re-examination: Nil**

**(Dictation is dictated to the Typist in the Open Court)**

**R. O. I. & A. C.**

**Prl. District and Sessions Judge,**

**Gadag.**

**IN THE COURT OF PRL. DISTRICT AND SESSIONS JUDGE, AT : GADAG**

SC No. 04/2021

CW - 24 / PW – 19

**Duly sworn on: 29.10.2024**

| | | |
|---|---|---|
| Witness Name | : | Dr. Venkatesh Mulimani |
| Father's Name | : | Marthandappa |
| Age | : | 56 years |
| Occupation | : | Orthopedician, Tatwadarshi, Hospital, Hubballi. |
| Residence | : | Hubballi. |

**(Witness deposing through Video Conference)**

The witness is present in the video conference room in the quality control office of Hubballi. Shri. Irfan, OT Technician is appointed as Remote Point Co-ordinator. Evidence is being recorded through video conference. Video Connectivity is envisioned through Google Meet http://meet.google.com/mff-voxg-qao. There is no problem in network. The accused and the Advocate for the accused persons are present in the court. Audio and video are clear.

## Chief Examination : by Public Prosecutor :

1. From the last 10 years, I have been working as Orthopedician in Tatwadarshi, Hospital, Hubballi.

2. With respect to this case, on 07.03.2020 at about 03.30 p.m. the PW-2 and PW-6 came to our Hospital with the history of assault. The PW-2 and 6 came to our Hospital on their own after taking treatment in GIMS, Gadag and they were admitted in our Hospital. The PW-2 and 6 were discharged from our Hospital on 19.03.2020.

3. I have treated the PW-2 and PW-6. On 11.03.2020, the police came to our Hospital and given requisition whether the PW-2 and PW-6 are in a position to give their statement or not. **Now, I see the requisition given by the police and the same is now marked as Ex.P-28. On the back side of the Ex.P-28, I have endorsed stating that, the PW-2 and PW-6 are able to give their statement. Now, I see my endorsement and the same is now marked as Ex.P-29 and the signature of the witness is marked as Ex.P-29(a).**

4. Now, I see the wound certificate of PW-2 issued by me and the same is already marked as Ex.P-20 **and the signature of the witness is now marked as Ex.P-20(b).**

5. On examination of PW-2, I found following injuries:

1) Sutured wound scalp (posterior region) Multiple soft tissue injuries.

6. I of the opinion that, the injuries caused to PW-2 is simple in nature. The injuries caused to PW-2 could be caused, if assaulted with MO-4 machet.

7. Now, I see the wound certificate of PW-6 issued by me and the same is already marked as Ex.P-21 **and the signature of the witness is now marked as Ex.P-21(b).**

8. On examination of PW-6, I found following injuries:

1) Scalp injury.

2) Shoulder soft tissue injury.

9. I of the opinion that, the injuries caused to PW-6 are simple in nature. The injuries caused to PW-6 could be caused, if assaulted with MO-1- stone, MO- 2 - soda bottle, MO-5- stick.

10. **Now, I see the letter given by me to the police regarding**



**treatment given to PW-2 and PW-6 and the same is now marked as EX.P-30 and the signature of the witness is marked as Ex.P-30(a).**

**Cross - examination by Shri. M.P. Koliwad, Adv. for Accused :**

11. The PW-2 and PW-6 stated that, the assault was happened in Hallikatti village of Gadag Taluk. The injuries caused to PW-2 and 6 could be caused if a person fallen on the tar road while going on the motor cycle.

12. It is not true to suggest that, I am not examined PWs-2 and 6 and issued the wound certificates at the instance of the police.

**Re-examination: Nil.**

**(Dictation is dictated to the Typist in the Open Court)**

**R. O. I. & A. C.**

**Prl. District and Sessions Judge,**
Gadag.

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ

ಎಸ್‌ಸಿ ನಂ. 04/2021

ಸಿಡಬ್ಲು: 22 / ಪಿಡಬ್ಲು: 18

ದಿನಾಂಕ: 29.10.2024

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ಉಮೇಶ ಲಮಾಣಿ |
| ತಂದೆ ಹೆಸರು | : | ರೂಪಲೆಪ್ಪ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಪೋಲೀಸ ಮುಖ್ಯ ಪೇದೆ ನಂ. 378, ಗಜೇಂದ್ರಗಡ ಪೋಲೀಸ ಠಾಣೆ |
| ವಾಸ ಸ್ಥಳ | : | ಗಜೇಂದ್ರಗಡ |

## ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರವರಿಂದ:

1. ನಾನು 2017 ರಿಂದ 2020 ರ ವರೆಗೆ ಮುಂಡರಗಿ ಪೋಲೀಸ ಠಾಣೆಯಲ್ಲಿ ಪೋಲೀಸ ಪೇದೆಯಾಗಿ ಕರ್ತವ್ಯ ಮಾಡಿದ್ದೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದಿ: 07.03.2020 ರಂದು, ಪ್ರಾಸಾ-15 ರವರು ಗುನ್ಹಾ ಜಾಗದ ಪಂಚನಾಮೆ ಸಮಯದಲ್ಲಿ ಫೋಟೋಗಳನ್ನು ತೆಗೆಯಬೇಕಾಗಿದ್ದು ತಮ್ಮ ಜೊತೆಗೆ ಬರಬೇಕೆಂದು ನನಗೆ ಆದೇಶವನ್ನು ಮಾಡಿರುತ್ತಾರೆ.

3. ಆಗ ನಾನು ನಮ್ಮ ಠಾಣೆಗೆ ಒದಗಿಸಿದ ಹ್ಯಾಂಡಿ ಕ್ಯಾಮೆರಾವನ್ನು ತೆಗೆದುಕೊಂಡು ಪ್ರಾಸಾ-15 ರವರ ಜೊತೆಗೆ ಹತ್ತಿಕಟ್ಟಿ ಗ್ರಾಮಕ್ಕೆ ಹೋಗಿ, ಪ್ರಾಸಾ-15 ರವರು ಗುನ್ಹಾ ಜಾಗದ ಪಂಚನಾಮೆ ಮಾಡಿದ್ದು, ಆಗ ನಾನು ಫೋಟೋವನ್ನು ತೆಗೆದಿರುತ್ತೇನೆ.

4. ಈಗ ನಾನು ತೆಗೆದ ಸದರಿ ಫೋಟೋವನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿರುತ್ತದೆ.

5. ದಿ: 08.03.2020 ರಂದು, ಈ ಪ್ರಕರಣಕ್ಕೆ ಸಂಬಂಧಿಸಿದ ದ್ವಿ-ಚಕ್ರ ವಾಹವನ್ನು ಒಬ್ಬ ಆರೋಪಿ ಹಾಜರಪಡಿಸಿದ್ದು, ಆಗ ಪ್ರಾಸಾ-15 ರವರು ಅದನ್ನು ಅಮಾನತ್ತುಪಡಿಸಿಕೊಂಡು ಪಂಚನಾಮೆಯನ್ನು ಮಾಡಿದ್ದು, ಆಗ ನಾನು ಫೋಟೋಗಳನ್ನು ತೆಗೆದಿರುತ್ತೇನೆ.

6. ಈಗ ನಾನು ತೆಗೆದ ಸದರಿ ಫೋಟೋಗಳನ್ನು ನೋಡುತ್ತಿದ್ದು, ಅವುಗಳನ್ನು ಈಗಾಗಲೇ ನಿಪಿ-4 ಮತ್ತು 5 ಎಂದು ಗುರುತಿಸಲಾಗಿರುತ್ತದೆ. ನಿಪಿ-4 ಮತ್ತು 5 ರಲ್ಲಿ ಕಾಣಿಸುವ ಆರೋಪಿಯು ಸದರಿ ಮೋಟರ ಸೈಕಲನ್ನು ಹಾಜರಪಡಿಸಿರುತ್ತಾನೆ. ಸದರಿ ದ್ವಿ-ಚಕ್ರ ವಾಹನವನ್ನು ನೋಡಿದರೆ ಗುರುತಿಸುತ್ತೇನೆ. ನಿಪಿ-4 ಮತ್ತು 5 ರಲ್ಲಿ ಕಾಣಿಸುವ ದ್ವಿ-ಚಕ್ರ ವಾಹನವನ್ನು ಆರೋಪಿ ಹಾಜರಡಿಸಿರುತ್ತಾನೆ.

7. ನಂತರ ಅದೇ ದಿನ, ಪ್ರಾಸಾ-15 ರವರು ಆರೋಪಿಗಳು ಹಾಜರಪಡಿಸುವ ಆಯುಧಗಳನ್ನು ಅಮಾನತ್ತುಪಡಿಸಿಕೊಳ್ಳಲಾಗುತ್ತಿದ್ದು ಮತ್ತು ಅವುಗಳನ್ನು ಅಮಾನತ್ತುಪಡಿಸಿಕೊಳ್ಳುವ ಸಮಯದಲ್ಲಿ ಫೋಟೋಗಳನ್ನು ತೆಗೆಯಬೇಕಾಗುತ್ತದೆ ಎಂದು ನನ್ನನ್ನು ಹತ್ತಿಕಟ್ಟಿ ಗ್ರಾಮಕ್ಕೆ ಕರೆದುಕೊಂಡು ಹೋಗಿದ್ದು, ಅಲ್ಲಿ ಆರೋಪಿತರ ಹೊಲದಲ್ಲಿ ಕಲ್ಲಿನ ಕುಟ್ರಿಯಲ್ಲಿ ಮುಚ್ಚಿಟ್ಟಿದ್ದ ಒಂದು ಮಚ್ಚನ್ನು ಹಾಗೂ ಒಂದು ಬಡಿಗೆಯನ್ನು ಆರೋಪಿಗಳು ಹಾಜರಪಡಿಸಿದ್ದು, ಆಗ ಪ್ರಾಸಾ-15 ರವರು ಅವುಗಳನ್ನು ಪಂಚನಾಮೆ ಮೂಲಕ ಅಮಾನತ್ತುಪಡಿಸಿಕೊಂಡಿರುತ್ತಾರೆ. ಆಗ ನಾನು ಫೋಟೋಗಳನ್ನು ತೆಗೆದಿರುತ್ತೇನೆ.

8. ಈಗ ನಾನು ತೆಗೆದ ಸದರಿ ಫೋಟೋಗಳನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-7 ರಿಂದ 10 ಎಂದು ಗುರುತಿಸಲಾಗಿರುತ್ತದೆ. ನಿಪಿ-7 ರಿಂದ 10 ರಲ್ಲಿ ಕಾಣಿಸುವ ಆರೋಪಿಯು ಸದರಿ ಆಯುಧಗಳನ್ನು ಹಾಜರಪಡಿಸಿರುತ್ತಾನೆ.

9. ಆರೋಪಿ ಹಾಜರಪಡಿಸಿದ ಮಚ್ಚು ಹಾಗೂ ಬಡಿಗೆಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ಮಚ್ಚು ಹಾಗೂ ಬಡಿಗೆಯನ್ನು ನೋಡುತ್ತಿದ್ದು, ಅವುಗಳನ್ನು ಈಗಾಗಲೇ ಮು.ಮಾ.4 ಮತ್ತು 5 ಎಂದು ಕ್ರಮವಾಗಿ ಗುರುತಿಸಲಾಗಿರುತ್ತದೆ.

10. ನಂತರ ಫೋಟೋಗಳನ್ನು ಸಿ.ಡಿ.ಗೆ ವರ್ಗಾಯಿಸಿ, ಸದರಿ ಸಿ.ಡಿ.ಯನ್ನು ಪ್ರಾಸಾ-15 ರವರಿಗೆ ಕೊಟ್ಟಿರುತ್ತೇನೆ. **ನಾನು ತಯಾರಿಸಿ ಕೊಟ್ಟ ಸಿ.ಡಿ.ಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ಅದನ್ನು ನೋಡುತ್ತಿದ್ದು, ಅದನ್ನು ನಿಪಿ-27 ಎಂದು ಗುರುತಿಸಲಾಯಿತು.** ಈ ಬಗ್ಗೆ ನಾನು ಪ್ರಮಾಣ ಪತ್ರವನ್ನು ಕೊಟ್ಟಿರುತ್ತೇನೆ.

11. ನಾನು ನಿರ್ವಹಿಸಿದ ಕರ್ತವ್ಯದ ಬಗ್ಗೆ ಪ್ರಾಸಾ-15 ರವರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ.

**(ಈ ಹಂತದಲ್ಲಿ, ಪಿಪಿ ರವರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಗದಗ**

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ

ಎಸ್‌ಸಿ ನಂ. 04/2021

ಸಿಡಬ್ಲ್ಯೂ: 20 / ಪಿಡಬ್ಲ್ಯೂ: 20

ದಿನಾಂಕ: 29.10.2024

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.

| | | |
|---|---|---|
| ಸಾಕ್ಷಿದಾರರ ಹೆಸರು | : | ಜಾಫರ ಬಚ್ಚೇರಿ |
| ತಂದೆ ಹೆಸರು | : | ಇಮಾಮಸಾಬ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ಪೋಲೀಸ ಮುಖ್ಯ ಪೇದೆ 969, ಮುಂಡರಗಿ ಪೋಲೀಸ ಠಾಣೆ |
| ವಾಸ ಸ್ಥಳ | : | ಮುಂಡರಗಿ |

## ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರವರಿಂದ:

1. ನಾನು ಡಿಸೆಂಬರ - 2018 ರಿಂದ ಇಲ್ಲಿಯವರೆಗೂ ಮುಂಡರಗಿ ಪೋಲೀಸ ಠಾಣೆಯಲ್ಲಿ ಪೋಲೀಸ ಮುಖ್ಯ ಪೇದೆಯಾಗಿ ಕೆಲಸ ಮಾಡುತ್ತಿದ್ದೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದಿ: 08.03.2020 ರಂದು ಪ್ರಾಸಾ-15 ರವರು ಆರೋಪಿಗಳನ್ನು ಪತ್ತೆ ಮಾಡಿಕೊಂಡು ಬರಬೇಕೆಂದು ನನಗೆ ಹಾಗೂ ಪಿಸಿ 366 ರವರಿಗೆ ಆದೇಶವನ್ನು ಮಾಡಿರುತ್ತಾರೆ.

3. ಆ ಪ್ರಕಾರ ಅದೇ ದಿನ ನಾನು ಹಾಗೂ ಪಿಸಿ 366 ರವರು ಸೇರಿ ಹತ್ತಿಕಟ್ಟಿ ಗ್ರಾಮಕ್ಕೆ ಹೋಗಿದ್ದು, ಅಲ್ಲಿ ಪರಿಶೀಲನೆ ಮಾಡಿ ನೋಡಿ, ಅಲ್ಲಿದ್ದ 7 ನೇ ಆರೋಪಿಯನ್ನು ಹಿಡಿದುಕೊಂಡು ಬಂದು ಪ್ರಾಸಾ-15 ರವರ ಮುಂದೆ ಹಾಜರಪಡಿಸಿರುತ್ತೇವೆ. 7 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆತ ಈ ದಿನ ನ್ಯಾಯಾಲಯದ ಮುಂದೆ ಹಾಜರ ಇರುತ್ತಾನೆ.

4. ಈ ಬಗ್ಗೆ ಪ್ರಾಸಾ-15 ರವರ ಮುಂದೆ ನಾನು ಹೇಳಿಕೆಯನ್ನು ಕೊಟ್ಟಿರುತ್ತೇನೆ.

## ಪಾಟಿ ಸವಾಲು: ಶ್ರೀ ಎಂ.ಪಿ. ಕೋಳಿವಾಡ, ಆರೋಪಿತರ ಪರ ವಕೀಲರಿಂದ:

5. ಪ್ರಾಸಾ-15 ರವರು ನಮಗೆ ಮೌಖಿಕವಾಗಿ ಆದೇಶವನ್ನು ಮಾಡಿದ್ದರು. ಈ ಬಗ್ಗೆ ಠಾಣಾ ಡೈರಿಯಲ್ಲಿ ನಮೂದು ಮಾಡಿದ್ದೇವೆ. ಸದರಿ ಡೈರಿಯ ದೃಢೀಕೃತ ನಕಲನ್ನು ತನಿಖಾಧಿಕಾರಿಗಳಿಗೆ ನಾವು

ಕೊಟ್ಟಿರುವುದಿಲ್ಲ.

6. ದಿಃ 08.03.2020 ರಂದು ಫ್ರಾಸಾ-15 ರವರು ಆರೋಪಿಗಳನ್ನು ಪತ್ತೆ ಮಾಡಿಕೊಂಡು ಬರಬೇಕೆಂದು ನನಗೆ ಹಾಗೂ ಪಿಸಿ 366 ರವರಿಗೆ ಆದೇಶವನ್ನು ಮಾಡಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. ಅದೇ ದಿನ ನಾನು ಹಾಗೂ ಪಿಸಿ 366 ರವರು ಸೇರಿ ಹತ್ತಿಕಟ್ಟಿ ಗ್ರಾಮಕ್ಕೆ ಹೋಗಿದ್ದು, ಅಲ್ಲಿ ಪರಿಶೀಲನೆ ಮಾಡಿ ನೋಡಿ, ಅಲ್ಲಿದ್ದ 7 ನೇ ಆರೋಪಿಯನ್ನು ಹಿಡಿದುಕೊಂಡು ಬಂದು ಫ್ರಾಸಾ-15 ರವರ ಮುಂದೆ ಹಾಜರಪಡಿಸಿರುತ್ತೇವೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಗದಗ**